**ಪಾಟೀ ಸವಾಲು ಶ್ರೀ ಹೆಚ್.ಜಿ.ಎ ವಕೀಲರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿಲ್ಲ. ನಾನು ಎಂದಿಗೂ ಮೂಡಿಗೆರೆ ಮತ್ತು ಬಣಕಲ್ ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ. ಅದೇ ರೀತಿ ದಿ.17.03.2023 ರಂದು ಅಂಗನವಾಡಿಯಿಂದ ನನ್ನ ತಂಗಿ ಮಗಳಿಗೆ ಭಾಗ್ಯಲಕ್ಷ್ಮೀ ಬಾಂಡ್ ಬಂದಿದೆ ಎಂದು ಚಾಸಾ-10 ರವರು ಮೂಡಿಗೆರೆಗೆ ಹೋಗಿ ಬರುವುದಾಗಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಆ ದಿನ ನಾನು ಚಾಸಾ-1, 8 ಮತ್ತು 10 ರವರು ಬೆ.10.30 ರಿಂದ 11.00 ರ ಸಮಯಕ್ಕೆ ಮನೆಯ ಬೀಗ ಹಾಕಿ ನಮ್ಮ ಮನೆಯ ಬೀಗದ ಕೀಯನ್ನು ಹೂವಿನ ಪಾಟ್ ಬಳಿ ಇಟ್ಟು ಹೊರಗೆ ಹೋಗಿದ್ದೆವು ಎಂದರೆ ಸರಿಯಲ್ಲ. ಮೂಡಿಗೇರೆಯಲ್ಲಿ ಬಾಂಡ್ ಪಡೆದು ಸ.4.00 ರ ಸಮಯದಲ್ಲಿ ಮನೆಗೆ ಹಿಂತಿರುಗಿರುತ್ತೇವೆ ನಂತರ ದೇವಸ್ಥಾನಕ್ಕೆ ಹೊರಡುವ ಸಮಯದಲ್ಲಿ ದಿ.23.03.2023 ರಂದು ಅಲ್ಮೇರವನ್ನು ಚಾಸಾ-1 ರವರು ತೆಗೆದು ನೊಡಲಾಗಿ ಅಲ್ಲಿ ಇದ್ದಂತಹ ಚಿನ್ನಾಭರಣಗಳು ಕಳುವು ಆಗಿದ್ದವು ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-1 ರವರು ಪೋಲಿಸ್ ಠಾಣೆಗೆ ಹೋಗಿ ಚಾಸಾ-1 ರವರ ಮುಖಾಂತರ ದೂರನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಿ.02.04.2023 ರಂದು ಪೋಲಿಸ್ ಠಾಣೆಯಿಂದ ಕರೆ ಮಾಡಿ ಕಳ್ಳತನವಾಗಿದ್ದ ಚಿನ್ನ ಸಿಕ್ಕಿದೆ ಎಂದು ನಮಗೆ ಕರೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ನಮ್ಮ ಅಲ್ಮೇರದಿಂದ 3 ಗ್ರಾಂ ಚಿನ್ನದ ಸರ, 15 ಗ್ರಾಂ ಚಿನ್ನದ ಓಲೆ, 10 ಗ್ರಾಂ ಚಿನ್ನದ ಸರ, 29 ಗ್ರಾಂ ನೆಕ್ಲೆಸ್ ಮತ್ತು 10 ಗ್ರಾಂ ನ ಮತ್ತೊಂದು ಸರ ಕಳುವಾಗಿದ್ದವು ಎಂದರೆ ಸರಿಯಲ್ಲ. ದಿ.02.04.2023 ರಂದು ಪೋಲಿಸರು ಸ್ಥಳ ಮಹಜರ್ ಕ್ರಮವನ್ನು ಜರುಗಿಸಿ ಫೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ದಿ.20.02.2025 ರಂದು ನಾನು ನ್ಯಾಯಾಲಯದ ಮುಂದೆ ಸಾಕ್ಷಿಯನ್ನು ನುಡಿದ ನಂತರ ನಮ್ಮ ಊರಿನ ಹಿರಿಯರ ಸಮಕ್ಷಮ ಮಾತುಕತೆಯಾಗಿರುತ್ತದೆ ಎಂದರೆ ಸರಿ. ನಾನು ಆರೋಪಿಯೊಂದಿಗೆ ರಾಜಿಯಾದ ಕಾರಣ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.